# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ
ಅಂಜನಾಪುರ ಉಪ ವಿಭಾಗ
2ನೇ ಮುಖ್ಯ ರಸ್ತೆ, 6ನೇ ಅಡ್ಡರಸ್ತೆ, ಆರ್.ಬಿ.ಐ ಲೇಔಟ್, ಕೊತ್ತನೂರು ಮುಖ್ಯರಸ್ತೆ, ಬೆಂಗಳೂರು-560078

ಸಂಖ್ಯೆ : ಸ.ಕಾ.ಅ/ಅ.ಉ.ವಿ/ಪಿ.ಆರ್/ /2020-21 ದಿನಾಂಕ :

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ.ಬಿ(12)ಪಿಆರ್/35/2020-21 ದಿ:21.09.2020 ರವರ ಆದೇಶದಂತೆ ದಿ:21.11.2020 ರಂದು ವಾರ್ಡ್ ನಂ.196-ಅಂಜನಾಪುರ ಕೋವಿಡ್ ವಾರ್ ರೂಂ ಕಛೇರಿಯ ಉದ್ಯಾನವನದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

********

**ಸಭೆಗೆ ಹಾಜರಾಗಿದ್ದವರ ವಿವರಗಳು:-**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ ಪ್ರಮೋದ್ ಕುಮಾರ್.ಎನ್.ಜಿ | ನೋಡಲ್ ಅಧಿಕಾರಿ | ಹಾಜರಿರುತ್ತಾರೆ. |
| 2 | ಶ್ರೀ ವಿ.ತಿಮ್ಮಯ್ಯ | ಸದಸ್ಯ ಕಾರ್ಯದರ್ಶಿ/ಸಹಾಯಕ ಅಭಿಯಂತರರು | ಹಾಜರಿರುತ್ತಾರೆ. |
| 3 | ಶ್ರೀಮತಿ ಡಾ॥ಕೀರ್ತಿ ಪ್ರಸಾದ್ | ವಾರ್ಡ್‌ನ ವೈಧ್ಯಾಧಿಕಾರಿಗಳು | ಹಾಜರಿರುತ್ತಾರೆ. |
| 4 | ಶ್ರೀ ನರೇಶ್.ಬಿ.ಎಸ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 5 | ಶ್ರೀ ಯೋಗೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 6 | ಶ್ರೀ ನವೀನ್ ಬಿ.ಸಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) | ಗೈರು ಹಾಜರಿರುತ್ತಾರೆ. |
| 7 | | ಸಹಾಯಕ ಇಂಜಿನಿಯರ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) | ಗೈರು ಹಾಜರಿರುತ್ತಾರೆ. |
| 8 | ಶ್ರೀ ರಂಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಗೈರು ಹಾಜರಿರುತ್ತಾರೆ. |
| 9 | ಶ್ರೀ ಸದಾನಂದ | ಕಂದಾಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 10 | ಶ್ರೀ ಶ್ರೀನಿವಾಸ್ | ಟ್ಯಾಕ್ಸ್ ಇನ್ಸ್‌ಪೆಕ್ಟರ್ | ಹಾಜರಿರುತ್ತಾರೆ. |
| 11 | ಶ್ರೀ ಅಂತೋಣಿ | ಕೋವಿಡ್-19 ನೋಡಲ್ ಅಧಿಕಾರಿಗಳು | ಹಾಜರಿರುತ್ತಾರೆ. |
| 12 | | ಪೋಲೀಸ್ ಇಲಾಖೆ | ಗೈರು ಹಾಜರಿರುತ್ತಾರೆ. |
| 13 | | ತೋಟಗಾರಿಕೆ ಅಧಿಕಾರಿಗಳು | ಗೈರು ಹಾಜರಿರುತ್ತಾರೆ. |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಂಜನಾಪುರ ವಾರ್ಡ್ ಸಂಖ್ಯೆ.196ರಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಪ್ರಮೋದ್ ಕುಮಾರ್.ಎನ್.ಜಿ ರವರು ದಿ:21.11.2020 ರಂದು ಶನಿವಾರ 10.30ಕ್ಕೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿಯ ಸದಸ್ಯರಿಗೆ ಶ್ರೀ ಕಾರ್ಯದರ್ಶಿ/ಸಹಾಯಕ ಅಭಿಯಂತರರು ಆದ ಶ್ರೀ ತಿಮ್ಮಯ್ಯ.ವಿ ರವರು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.



Scanned with CamScanner

1. ಬೀದಿ ದೀಪಗಳ ನಿರ್ವಹಣೆ:-

ವಾರ್ಡ್ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ನಿರ್ವಹಣೆ, ಸರಿಯಾಗಿ ನಿರ್ವಹಿಸದೇ ಇರುವುದಾಗಿ ಸದಸ್ಯರು ಸಭೆಯಲ್ಲಿ ತಿಳಿಸಿರುತ್ತಾರೆ. ಸದರಿ ಬೀದಿ ದೀಪಗಳಿಗೆ ಸಂಬಂಧಪಟ್ಟಂತೆ ಸಭೆಗೆ ಆಗಮಿಸಿದ ಅಧಿಕಾರಿಗಳ ಪ್ರತಿನಿಧಿಗೆ ಸದರಿ ದೂರಿನ ವಿಷಯವಾಗಿ ತಿಳಿಸಿ ಮುಂದಿನ ಸಭೆಯ ದಿನಗಳೊಳಗಾಗಿ ಪರಿಹರಿಸಲು ತಿಳಿಸಿಲಾಯಿತು.

2. ಬೆಸ್ಕಾಂ:-

ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣೆಯಲ್ಲಿ ತೊಂದರೆಯಾಗುತ್ತಿದ್ದು, ಇದರ ಬಗ್ಗೆ ಸಭೆಯಲ್ಲಿ ಸದರಿ ಬೆಸ್ಕಾಂ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿರುತ್ತಾರೆ ಆದ್ದರಿಂದ ಸದರಿ ವಿಷಯದ ಬಗ್ಗೆ ಮುಂದಿನ ಸಭ್ಯೆಯಲ್ಲಿ ಚರ್ಚೆ ಕ್ರಮ ಕೈಗೊಳ್ಳುವಂತೆ ಸಮೀತಿ ಅಧ್ಯಕ್ಷರು ತಿಳಿಸಿರುತ್ತಾರೆ.

3. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ:-

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ಬಡಾವಣೆಗಳಲ್ಲಿ ರಸ್ತೆ, ಒಳಚರಂಡಿ ಹಾಗೂ ಬೀದಿ ದೀಪಗಳ ನಿರ್ವಹಣೆ ಸರಿಯಾಗಿ ನಿರ್ವಹಿಸದೇ ಇರುವುದಾಗಿ ಮತ್ತು ಬೀದಿ ದೀಪಗಳ Fittings ಗಳು ಹಾಳಾಗಿದ್ದು, ಸದರಿ ಸ್ಥಳಗಳಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದೆ ಸಾರ್ವಜನಿಕರು ಓಡಾಡಲು ಬಹಳ ಕಷ್ಟಕರವಾಗಿರುತ್ತದೆಂದು ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿತ್ತು.

ಇದಕ್ಕೆ ಸಂಬಂಧಪಟ್ಟಂತೆ ಸದರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿದ್ದು ಸದರಿ ಸಮಸ್ಯೆಯ ಬಗ್ಗೆ ಮೇಲಾಧಿಕಾರಿಗಳಲ್ಲಿ ಚರ್ಚಿಸಿ ಕ್ರಮಕೈಗೊಳ್ಳಲಾಗುವುದೆಂದು ಸಮೀತಿ ಅಧ್ಯಕ್ಷರು ತಿಳಿಸಿರುತ್ತಾರೆ.

4. ಘನತ್ಯಾಜ್ಯ ನಿರ್ವಹಣೆ:-

ವಾರ್ಡ್ ವ್ಯಾಪ್ತಿಯಲ್ಲಿ ಸಮಿತಿಗೆ ಆಗಮಿಸಿದ ಶ್ರೀ ಸರದಾರ್ ರವರು ಆಶ್ರಯ ಕಾಲೋನಿಯಲ್ಲಿ ಕಸದ ಸಂಗ್ರಣ ಕ್ರಮವಾಗಿ ನಡೆಯದೇ ಇರುವುದಾಗಿ ದೂರಿದ್ದು ಹಾಗೂ ಅವಲಹಳ್ಳಿ ಮತ್ತು ಮಸೀದಿ ರಸ್ತೆಯಲ್ಲಿ ಕಸದ ರಾಶೀಗಳಾಗಿದ್ದು ತ್ವರಿತವಾಗಿ ಇದ್ದನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸಮೀತಿ ಅಧ್ಯಕ್ಷರು ತಿಳಿಸಿರುತ್ತಾರೆ.

5. ಒಳಚರಂಡಿ ವ್ಯವಸ್ಥೆ:-

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಅವಲಹಳ್ಳಿ ಕೆರೆಯಲ್ಲಿ ಒಳಚರಂಡಿ ಮತ್ತು ಬೃಹತ್ ನೀರುಗಾಲುವೆ ಇಲಾಖೆಯಿಂದ ನಿರ್ಮಿತವಾದ ಚರಂಡಿಯಲ್ಲಿ ಹೂಳು ತುಂಬಿದ್ದು ಹಾಗೂ ಒಳಚರಂಡಿ ನೀರು ಬೃಹತ್ ನೀರುಗಾಲುವೆಗೆ ಮಿಕ್ಸ್ ಆಗುತ್ತಿದ್ದು ಇದರಿಂದ ನಂದಿ ಗಾರ್ಡ್‌ನ್ ಅಪಾರ್ಟ್‌ಮೆಂಟ್ ರವರು ಸಭೆಯಲ್ಲಿ ತಿಳಿಸಿದ್ದು ಇದರ ಬಗ್ಗೆ ಬಹಳ ತೊಂದರೆಯಾಗುತ್ತಿದ್ದು ಅಕ್ಕ ಪಕ್ಕದವರು ವಾಸಿಸಲು ಕೂಡ ಕಷ್ಟಕರವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಕೆರೆಯ ಪ್ರಾಧಿಕಾರದ ಮತ್ತು ಬೃಹತ್ ನೀರುಗಾಲುವೆ ಇಲಾಖೆಯ ಅಧಿಕಾರಿಗಳಲ್ಲಿ ಚರ್ಚಿಸಿ ಇದ್ದನ್ನು ಸರಿಪಡಿಸುವಂತೆ ಕೋರಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.

6. ಕುಡಿಯುವ ನೀರಿನ ವ್ಯವಸ್ಥೆ:-

ಈ ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಬಗ್ಗೆ ಸಾರ್ವಜನಿಕವಾಗಿ ಚರ್ಚಿಸಲಾಗಿ ಸದರಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯಲ್ಲಿ ಯಾವುದೇ ತೊಂದರೆ ಇರುವುದಿಲ್ಲ ಕುಡಿಯುವ ನೀರಿನ ನಿರ್ವಹಣೆಯು ಉತ್ತಮವಾಗಿರುತ್ತದೆ ಎಂದು ಈ ಸಭೆಯಲ್ಲಿ ಸದಸ್ಯರುಗಳು ಶ್ಲಾಘನೆಯನ್ನು ವ್ಯಕ್ತಪಡಿಸಿರುತ್ತಾರೆ.



Scanned with CamScanner

7. ಪೋಲೀಸ್ ಇಲಾಖೆ:-

ಈ ವಾರ್ಡ್ ವ್ಯಾಪ್ತಿಯಲ್ಲಿ ಗುರುಕುಲ್ ಶಾಲೆ ರಸ್ತೆಯ 4,5, ಮತ್ತು 6 ಅಡ್ಡ ರಸ್ತೆಗಳಲ್ಲಿ ಅನಾಮದೇಯ ವ್ಯಕ್ತಿಗಳು ಮಾದಕ ವಸ್ತುಗಳನ್ನು ಸೇವನೆ ಮಾಡುತ್ತ ಸಾರ್ವಜನಿಕರಿಗೆ ಬಹಳ ತೊಂದರೆ ಉಂಟು ಮಾಡುತ್ತಿರುವುದಾಗಿ ಸಭೆಯಲ್ಲಿ ಸಂಬಂಧಪಟ್ಟ ಸ್ಥಳಿಯ ಸದಸ್ಯರು ತಿಳಿಸಿರುತ್ತಾರೆ.

ಇದರೆ ಬಗ್ಗೆ ಕ್ರಮವಹಿಸಲು ಮಾನ್ಯ ಪೋಲೀಸ್ ಅಧಿಕಾರಿಗಳಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಕೋರುವುದಾಗಿ ಸಭೆಗೆ ತಿಳಿಸಲಾಗಿರುತ್ತದೆ.

8.ನೋಡಲ್ ಅಧಿಕಾರಿ:-

ಈ ಸಭೆಯಲ್ಲಿ ಮುಕ್ತವಾಗಿ ವಾರ್ಡ್ ವ್ಯಾಪ್ತಿಯ ಸಮಸ್ಯೆಗಳನ್ನು ಚರ್ಚಿಸಲು ಈ ಕೆಳಕಂಡ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿರುತ್ತಾರೆ.

ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕರಾದ ಶ್ರೀ ಪ್ರಮೋದ್ ಕುಮಾರ್ ರವರು ಆದ್ಯತೆ ಮೇರೆಗೆ ಸೂಕ್ತ ಕ್ರಮ ಜರುಗಿಸಲಾಗುವುದಾಗಿ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.196 ಅಂಜನಾಪುರ

ಅಧ್ಯಕ್ಷಕರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ.196 ಅಂಜನಾಪುರ

Scanned with CamScanner